



ಹೊಸ ಶೈಲಿಯ ದೀಪಗಳಿಗೆ ಇಂತಹುದೇ ಆಕಾರ ಎಂಬ ಕಟ್ಟುಪಾಡುಗಳೇನೂ ಇಲ್ಲ. ವಿನ್ಯಾಸಗಾರರ ಅಭಿರುಚಿಗೆ ತಕ್ಕಂತೆ ಅವು ನಾನಾ ರೂಪ ತಳೆಯುತ್ತವೆ. 'ಓಂ ಹಣತೆ', 'ಸೂರ್ಯ ಹಣತೆ', 'ಗಣಪತಿ ಹಣತೆ', 'ದುರ್ಗಾ ದೀಪ, 'ಪಂಚಮುಖೀ ಹಣತೆ', 'ತುಳಸೀ ದೀಪ' 'ದೀಪದ ತಟ್ಟೆ' ಮೊದಲಾದುವು ಜನಪ್ರಿಯ ದೀಪಗಳು. ಜೊತೆಗೆ ಸೂರ್ಯನ ಆಕಾರದ, ಕಡಲ ಚಿಪ್ಪುಗಳ ಆಕಾರದ, ಹಲವಾರು ಹೂವುಗಳ ರೀತಿಯ, ನಕ್ಷತ್ರದಾಕಾರದ ಹಣತೆಗಳಿಗೂ ಬೇಡಿಕೆ ಇದೆ.

ತಮ್ಮ ಕುಂಡಲಿಗೆ ಹೊಂದುವ ರಾಶಿಚಿಹ್ನೆಯ ದೀಪಗಳಿಗೂ ಜನರಿಂದ ಬೇಡಿಕೆ ಇದೆ. ಮಣ್ಣಿನ ಹಣತೆಗೆ ಚಿನ್ನದ ಬಣ್ಣ ಬಳಿದು ಅದು ಮಣ್ಣಿನ ದೀಪ ಎಂಬುದನ್ನೇ ಮರೆಮಾಚುವ 'ಸೋನಾ ದಿಯಾ' ಸಹಾ ಅಂಗಡಿಗಳಲ್ಲಿ ಕಂಡು ಬರುತ್ತದೆ. ಸಣ್ಣ ಸಣ್ಣ ಮಡಕೆಗಳಿಗೆ ಬಣ್ಣಬಣ್ಣದ ಚಿತ್ತಾರ ಮಾಡಿ ಮುತ್ತಿನ ಸರವನ್ನು ಕಟ್ಟಿ ಅಲಂಕರಿಸಿದ 'ಮಟಕಾ ದಿಯಾ' ಉತ್ತರ ಭಾರತದಲ್ಲಿ ಬಹು ಜನಪ್ರಿಯ. ಕುಂದನ್ ಶೈಲಿಯಲ್ಲಿ ಅಲಂಕರಿಸಿದ ದೀಪಗಳೂ ಅಪಾರ ಜನಪ್ರೀತಿ ಗಳಿಸಿವೆ.

ಎಣ್ಣೆ, ಬತ್ತಿ ಇತ್ಯಾದಿ ಹುಡುಕುವ ರಗಳೆಯೇ ಬೇಡ ಎನ್ನುವವರಿಗೆ ಮೇಣದಿಂದ ತುಂಬಿಸಿ ಸಿದ್ಧಗೊಳಿಸಿದ (ಪ್ರಿ ವ್ಯಾಕ್ಸ್) ದೀಪಗಳೂ ಇವೆ. ಸಾಧಾರಣ ಡಿಸೈನರ್ ದೀಪಗಳ ಜೋಡಿಗೆ ಇನ್ನೂರು ಮುನ್ನೂರು ರೂಪಾಯಿ ಬೆಲೆ ಇದ್ದರೆ, ಮುತ್ತುಗಳಿಂದ ಸಿಂಗರಿಸಿದ ಹಣತೆಗಳ ಬೆಲೆ ಮೂರೂವರೆ ಸಾವಿರದಿಂದ ಐದು ಸಾವಿರ ರೂಪಾಯಿವರೆಗೂ ಇರುತ್ತದೆ. ವಿದೇಶೀ ಭಾರತೀಯರಿಗೆ ರಫ್ತು ಮಾಡುವ ಹಣತೆಗಳಿಗೆ ಮಾತ್ರ ಡಾಲರ್‌ಗಳಲ್ಲಿ ಬೆಲೆ! ಅದೂ ಬಿಡಿಬಿಡಿಯಾಗಿ ದೊರೆಯುವುದಿಲ್ಲ. ನಾಲ್ಕು ಹಣತೆಯ, ಆರು ಹಣತೆಯ ಅಥವಾ ಎಂಟು ಹಣತೆಯ ಸೆಟ್‌ಗಳಲ್ಲಿ ಮಾತ್ರ ಲಭ್ಯ.

ಈ ಮಣ್ಣಿನ ಹಣತೆಗೂ ಏಳು ದಿನಗಳ ಗ್ಯಾರಂಟಿ ಇದೆ! ಪ್ರಖ್ಯಾತಿ ಪಡೆದ ಕಲಾವಿದರೂ ದೀಪಾವಳಿ ಸಮಯದಲ್ಲಿ ಮಣ್ಣಿನ ದೀಪಗಳ ಅಲಂಕಾರದಲ್ಲಿ ತೊಡಗಿಕೊಳ್ಳುತ್ತಾರೆ. ಆದರೆ ಅವರದೇನಿದ್ದರೂ ಹೈ-ಫೈ ವಹಿವಾಟು! ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಮಾತ್ರ ಅವರು ತಯಾರಿಸಿದ ದೀಪಗಳ ದರ್ಶನ ಭಾಗ್ಯ ಸಿಗುತ್ತದೆ! ಬೆಲೆ ಸಹಾ ಆಕಾಶದಲ್ಲೇ ಇರುತ್ತದೆ!

ಭಾರೀ ಬೆಲೆಯ ಇಂತಹ ದೀಪಗಳನ್ನು ಕೊಳ್ಳಲಾಗದಿದ್ದರೆ ಸರಳವಾದ ದೀಪಗಳನ್ನು ತಂದು ಮನೆಯಲ್ಲೇ ಅವರವರ ಅಭಿರುಚಿಗೆ ಅನುಗುಣವಾಗಿ ಡಿಸೈನರ್ ದೀಪ ತಯಾರಿಸಿಕೊಳ್ಳಬಹುದು. ಪೋಸ್ಟರ್ ಕಲರ್ ಅಥವಾ ಅಕ್ರಿಲಿಕ್ ಬಣ್ಣಗಳನ್ನು ಬಳಿದು ಅದರ ಮೇಲಷ್ಟು ಮಿನುಗುವ ಚಮಕ್ ಪುಡಿ ಉದುರಿಸಬಹುದು. ಅಥವಾ ಮಿನುಗುವ ಬಣ್ಣವನ್ನೇ ಉಪಯೋಗಿಸಿದರೆ ಬಣ್ಣಕ್ಕೆ ಒನಪಿನ ಜೊತೆಗೆ ಹೊಳಪೂ ಬರುತ್ತದೆ.

ಮುತ್ತಿನಂತೆಯೇ ಕಾಣುವ ಕಡಿಮೆ ಬೆಲೆಯ ಕೃತಕ ಮುತ್ತುಗಳನ್ನು ಅಂಟಿನ ಸಹಾಯದಿಂದ ಅದರ ಮೇಲೆಲ್ಲಾ ಅಂಟಿಸಿ ಸ್ವಂತದ ಡಿಸೈನರ್ ದೀಪಗಳನ್ನು ತಯಾರಿಸಿಕೊಳ್ಳಬಹುದು.